


‘ಮಂಗಳಮುಖಿ’ ಎನ್ನುವ ಶಬ್ದ ಹೊರಹೊಮ್ಮಿಸುವ ಅರ್ಥದಷ್ಟು ಅವರ ಬದುಕು ಶುಭಕರವಾಗಿಲ್ಲ. ಮಂಗಳಮುಖಿ ಎಂದು ಕರೆಸಿಕೊಳ್ಳುವ ಲಿಂಗತ್ವ ಅಲ್ಪಸಂಖ್ಯಾತರ ಬದುಕಿನ ವಾಸ್ತವಕ್ಕೂ ಆ ಪದದ ಭಾವಕ್ಕೂ ಯಾವ ಸಂಬಂಧವೂ ಇಲ್ಲ. ನಿತ್ಯವೂ ಅನುಮಾನ ಹಾಗೂ ಅವಮಾನದ ನೋಟ–ಮಾತುಗಳ ಇರಿತದಿಂದ ಗಾಸಿಗೊಳ್ಳುತ್ತಿದ್ದಾರೆ. ಸಮಾಜದ ಮುಖ್ಯವಾಹಿನಿ ಲೈಂಗಿಕ ಅಲ್ಪಸಂಖ್ಯಾತರನ್ನು ಒಳಗೊಳ್ಳುವ ಕುರಿತು ಪ್ರಯತ್ನ ಹಾಗೂ ಹೋರಾಟಗಳು ನಿರಂತರವಾಗಿ ನಡೆಯುತ್ತಿವೆ. ಇದರ ಫಲವಾಗಿ, ದಶಕದ ಹಿಂದಷ್ಟೇ ಮತದಾನದ ಹಕ್ಕು ದೊರೆತಿದೆ. ಸುಪ್ರೀಂ ಕೋರ್ಟ್ ಮಧ್ಯಪ್ರವೇಶದಿಂದಾಗಿ, ಸರ್ಕಾರಿ ಉದ್ಯೋಗದಲ್ಲಿ ಶೇ. 1ರ ಮೀಸಲಾತಿ ದೊರೆತಿದೆ. ರಾಜ್ಯದಲ್ಲಿ ಈಚೆಗೆ ನಡೆದ ಶಿಕ್ಷಕರ ನೇಮಕಾತಿಯಲ್ಲಿ ಮೊದಲ ಬಾರಿಗೆ ಲೈಂಗಿಕ ಅಲ್ಪಸಂಖ್ಯಾತ ಸಮುದಾಯದ ಮೂವರು ಶಿಕ್ಷಕ ಹುದ್ದೆಗೆ ಅರ್ಹತೆ ಪಡೆದಿದ್ದಾರೆ. (ಆಯ್ಕೆಪಟ್ಟಿಗೆ ಹೈಕೋರ್ಟ್ ತಾತ್ಕಾಲಿಕ ಮಧ್ಯಂತರ ತಡೆಯಾಜ್ಞೆ ನೀಡಿದೆ.) ಸರ್ಕಾರಿ ಹುದ್ದೆಗಳಲ್ಲಿನ ಮೀಸಲಾತಿ ಲೈಂಗಿಕ ಅಲ್ಪಸಂಖ್ಯಾತರ ಅಭಿವೃದ್ಧಿಗೆ ಎಷ್ಟರಮಟ್ಟಿಗೆ ಪೂರಕ? ಈ ಪ್ರಶ್ನೆಯ ಹಿನ್ನೆಲೆಯಲ್ಲಿ, ಲೈಂಗಿಕ ಅಲ್ಪಸಂಖ್ಯಾತ ಸಮುದಾಯದ ತವಕತಲ್ಲಣಗಳು, ಆ ಸಮುದಾಯ ಮುಖ್ಯವಾಹಿನಿಯ ಭಾಗವಾಗುವ ನಿಟ್ಟಿನಲ್ಲಿ ಆಗಬೇಕಾದ ಬದಲಾವಣೆಗಳ ಕುರಿತು, ಅದೇ ಸಮುದಾಯದ ಪ್ರತಿನಿಧಿಗಳನ್ನು ‘ಸುಧಾ’ ಮಾತನಾಡಿಸಿದೆ. ಈ ಟಿಪ್ಪಣಿಗಳು, ಅಲಕ್ಷಿತ ಸಮುದಾಯದ ಬಗ್ಗೆ ಸಮಾಜ ಒಳಗಣ್ಣು ತೆರೆಯಲು ಒತ್ತಾಯಿಸುವಂತಿವೆ.

■ ರಾಘವೇಂದ್ರ ಕೆ. ತೊಗರ್ಸಿ

